ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಗುರುವಾರ, ದಿನಾಂಕ : 24 ನೇ ಸೆಪ್ಟೆಂಬರ್, 2020

ಕಲಬುರಗಿ ಜಿಲ್ಲೆಯ ಗಂಡೋರಿ ನಾಲಾ ಆಧುನೀಕರಣ ಕಾಮಗಾರಿಯಲ್ಲಿ ಅವ್ಯವಹಾರ ಮಾಡಿರುವ ಕುರಿತು

ಡಾ. ಚಂದ್ರಶೇಖರ್ ಬಿ. ಪಾಟೀಲ್(ಪದವೀಧರರ ಕ್ಷೇತ್ರ) –

47 (522) ಜಲಸಂಪನ್ಮೂಲ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕಲಬುರಗಿ ಜಿಲ್ಲೆಯ ಗಂಡೋರಿ ನಾಲಾ ಆಧುನೀಕರಣ ಕಾಮಗಾರಿಯಲ್ಲಿ ಎಲ್. ಬಿ. ಸಿ. ಮತ್ತು ಆರ್. ಬಿ. ಸಿ. ಎರಡು ಬದಿಯ ಎಸ್. ಆರ್ ಮತ್ತು ಐ. ಪಿ. ಗಳಿಗೆ ರಸ್ತೆ ಮಾಡದೆ ಬಿಲ್ಲು ಪಾವತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಅದೇ ರೀತಿ ಆಧುನೀಕರಣ ಕಾಮಗಾರಿಗೆ ಹಲವಾರು ಕಿಲೋ ಮೀಟರ್‌ವರೆಗೆ ಮುರಂ (ಸ್ಯಾಂಡ್) ಹಾಕದೆ ಕಾಂಕ್ರೇಟ್ ಹಾಕಿ ಕಾಲುವೆ ಮಾಡಿರುವುದು ನಿಜವೇ; ಮುಖ್ಯ ಕಾಲುವೆ ವಿತರಣಾ ಕಾಲುವೆ, ಹೊಸ ಗೇಟ್ ಅಳವಡಿಕೆ, ಸಿಡಿ ನಿರ್ಮಾಣ ಮುಂತಾದ ಕಾಮಗಾರಿಗಳಲ್ಲಿ ಸುಮಾರು 20 ರಿಂದ 25 ಕೋಟಿ ಆಧುನೀಕರಣ ಕಾಮಗಾರಿಯಲ್ಲಿ ಅವ್ಯವಹಾರ ನಡೆದಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?